KAYG030011942020

## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಯಾದಗಿರಿ.

**ದಿನಾಂಕ 02 ನೇ ಮೇ ಮಾಹೆ 2026 ನೇ ಇಸವಿ**

**ಃಉಪಸ್ಥಿತರುಃ**

**ಶ್ರೀ ರಾಹುಲ ರಾವ್, ಬಿ.ಎ. ಎಲ್.ಎಲ್.ಬಿ**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ**
**ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಯಾದಗಿರಿ.**

**ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 296/2020**

**ಫಿರ್ಯಾದುದಾರರುಃ** ಕರ್ನಾಟಕ ಸರ್ಕಾರವನ್ನು ಪ್ರತಿನಿಧಿಸುವವರು
ಯಾದಗಿರಿ(ಗ್ರಾ) ಪೋಲಿಸ್ ಠಾಣೆ ಯಾದಗಿರಿ.

**(ಪ್ರತಿನಿಧಿಸುವವರು ಸಹಾಯಕ ಸರ್ಕಾರಿ ಅಭಿಯೋಜಕರು)**

**-ಃ ವಿರುದ್ದ ಃ-**

**ಆರೋಪಿಃ-** 1. ರವಿಕುಮಾರ ತಂದೆ ಜ್ಞಾನಮಿತ್ರ ನರಸಣ್ಣೋರ
ವಃ 24 ವರ್ಷ,
ಸಾಃ ಯಡ್ಡಳ್ಳಿ
ತಾಃ ಮತ್ತು ಜಿಃ ಯಾದಗಿರಿ.

**(ಪ್ರತಿನಿಧಿಸುವವರು ಶ್ರೀ .ಎಸ್.ಎಸ್.ಪಿ ವಕೀಲರು)**

ಫಿರ್ಯಾದಿ ದಾಖಲು ಮಾಡಿದ ದಿನಾಂಕ ಃ 08-02-2020

**KAYG030011942020**

| | | |
|---|---|---|
| ಆರೋಪಗಳು | ಃ | ಕರ್ನಾಟಕ ಅಬಕಾರಿ ಕಾಯ್ದಿ ಕಲಂ 32, 34. |
| ಸಾಕ್ಷಿಗಳ ವಿಚಾರಣೆ ಪ್ರಾರಂಭ | ಃ | 06-12-2024 |
| ತೀರ್ಪು ನೀಡಿದ ದಿನಾಂಕ | ಃ | 02-05-2026 |
| ತೀರ್ಮಾನ | ಃ | ಖುಲಾಸೆ. |

**(ರಾಹುಲ ರಾವ್)**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು,**
**ಯಾದಗಿರಿ.**

**ಃ ತೀರ್ಪು ಃ**

ಯಾದಗಿರಿ(ಗ್ರಾ) ಪೋಲಿಸ್ ಠಾಣೆಯ ಪೋಲಿಸರು ಆರೋಪಿ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32, 34 ರಡಿಯಲ್ಲಿ ಅಪರಾಧವೆಸಗಿರುತ್ತಾನೆ ಎಂದು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2.ಅಭಿಯೋಜನೆ ಮೊಕದ್ದಮೆ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ.**

ಯಾದಗಿರಿ(ಗ್ರಾ)ಪೋಲಿಸ್ ಠಾಣೆಯ ವಾಪ್ತಿಯಲ್ಲಿ ಬರುವ ಯಡ್ಡಳ್ಳಿ ಗ್ರಾಮದಲ್ಲಿ ದಿನಾಂಕ 08.02.2020 ರಂದು ಆರೋಪಿತನು ಅಕ್ರಮವಾಗಿ ತನ್ನ ಅಂಗಡಿಯಲ್ಲಿ ಮದ್ಯ

ಮಾರಾಟ ಮಾಡುತ್ತಿದ್ದಾರೆ ಎಂದು ಚಾಸಾಃ1 ರವರಿಗೆ ಮಾಹಿತಿ ಬಂದ ಮೇರೆಗೆ, ಸದರಿ ಮಾಹಿತಿ ಅನುಗುಣವಾಗಿ ಚಾಸಾಃ1 ರವರು ಅವರ ಸಿಬ್ಬಂದಿ ಮತ್ತು ಪಂಚರು ಜೊತೆಗೆ ಗುನ್ನಾ ಸ್ಥಳಕ್ಕೆ ಹೋದಾಗ ಆರೋಪಿ ಮದ್ಯವನ್ನು ಮಾರಾಟ ಮಾಡುವುದನ್ನು ನೋಡಿ, ಅದೇ ಸಮಯದಲ್ಲಿ ಆರೋಪಿಯನ್ನು ಬಂದಿಸಿರುತ್ತಾರೆ. ಸದರಿ ಸ್ಥಳವನ್ನು ಪರಿಶೀಲಿಸಿದಾಗ, 90 ಎಂ.ಎಲ್ 50 ಓರಿಜಿನಲ್ ಚಾಯ್ಸಿ ಪಾಕೇಟ್ ಸಿಕ್ಕಿರುತ್ತದೆ. ಸದರಿ ಚಾಸಾಃ1 ರವರು ಮದ್ಯವನ್ನು ಜಪ್ತಿ ಮಾಡಿಕೊಂಡು ಠಾಣೆಗೆ ಬಂದು ವರದಿಯ ಸಮೇತವಾಗಿ ಠಾಣಾಧಿಕಾರಿ ಮುಂದೆ ಹಾಜರುಪಡಿಸಿರುತ್ತಾರೆ. ಸದರಿ ಠಾಣಾಧಿಕಾರಿಯು ಆರೋಪಿ ವಿರುದ್ಧ ಗುನ್ನೆಯನ್ನು ದಾಖಲಿಸಿಕೊಂಡು, ಸಾಕ್ಷಿದಾರರ ಹೇಳಿಕೆಯನ್ನು ಪಡೆದುಕೊಂಡು, ತನಿಖಾಧಿಕಾರಿಯು ತನಿಖಾ ಕಾರ್ಯ ಪೂರ್ಣಗೊಳಿಸಿ ಆರೋಪಿ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದಿ ಕಲಂ 32, 34 ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**3.** ತನಿಖಾಧಿಕಾರಿಗಳು ತನಿಖಾ ಕಾರ್ಯ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿದ ನಂತರ ಈ ನ್ಯಾಯಾಲಯ ಕರ್ನಾಟಕ ಅಬಕಾರಿ ಕಾಯ್ದಿ ಕಲಂ 32, 34 ರಡಿಯಲ್ಲಿ ಅಪರಾಧಗಳಿಗೆ ಸಂಜ್ಞೆಯತೆಯನ್ನು ತೆಗೆದುಕೊಂಡಿದೆ. ಆರೋಪಿತಳು ನ್ಯಾಯಾಲಯದಿಂದ ಜಾಮೀನು ಅರ್ಜಿಯನ್ನು ಸಲ್ಲಿಸಿ ಜಾಮೀನನ್ನು ಪಡೆದುಕೊಂಡಿರುತ್ತಾನೆ. ದಂಡ ಪ್ರಕ್ರಿಯಾ ಸಂಹಿತೆ ಕಲಂ.207 ರಂತೆ ಆರೋಪಿತಳಿಗೆ ದೋಷಾರೋಪಣಾ ಪಟ್ಟಿಯ ನಕಲನ್ನು ಜಾರಿಗೊಳಿಸಿದೆ. ದೊಷಾರೋಪಣೆಯನ್ನು ರಚಿಸುವ ಪೂರ್ವದಲ್ಲಿ ವಾದವನ್ನು ಆಲಿಸಲಾಯಿತು. ಆದರೆ ಆರೋಪಿತನಿಗೆ ದೋಷಾರೋಪಣೆ

ರಚಿಸುವ ಪೂರ್ವದಲ್ಲಿಯೇ ವಿಮೋಚನೆ ಮಾಡಲು ಯಾವುದೇ ಸಕಾರಣಗಳು ಈ ನ್ಯಾಯಾಲಯಕ್ಕೆ ಕಂಡು ಬರದ ಕಾರಣ ದೋಷಾರೋಪಣೆಯನ್ನು ರಚಿಸಲಾಯಿತು.

**4.** ಆರೋಪಿತನು ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದಿ ಕಲಂ 32, 34 ರಡಿಯಲ್ಲಿ ಅಪರಾಧಕ್ಕೆ ದೋಷಾರೋಪಣೆಯನ್ನು ರಚಿಸಿ, ಓದಿ ವಿವರಿಸಿ ಹೇಳಿದ್ದು ಆರೋಪಿತನು ತಾನು ತಪ್ಪು ಮಾಡಿರುವುದಿಲ್ಲ, ವಿಚಾರಣೆಯಾಗಬೇಕು ಎಂದು ಉತ್ತರಿಸಿರುತ್ತಾರೆ.

**5.** ಅಭಿಯೋಜನಾ ಪಕ್ಷದವರು ಆರೋಪಿತನ ವಿರುದ್ಧ ಮಾಡಿರುವ ಆರೋಪಗಳನ್ನು ರುಜುವಾತು ಪಡಿಸಲು ತಮ್ಮ ಪರವಾಗಿ ಒಟ್ಟು 3 ಜನ ಸಾಕ್ಷಿದಾರರನ್ನು ಪ್ರಾ.ಸಾಃ 1 ರಿಂದ 3 ಎಂದು ವಿಚಾರಣೆಗೆ ಒಳಪಡಿಸಿ, ನಿಪಿ-1 ರಿಂದ ನಿಪಿ-5 ಎಂಬ ದಾಖಲೆಗಳನ್ನು ಗುರುತಿಸಿರುತ್ತಾರೆ. ಚ಼ಾಸಾಃ1 ಮತ್ತು 3 ರವರಿಗೆ ಸಾಕಷ್ಟು ಸಮಯವಕಾಶ ನೀಡಿದರೂ ಕೂಡ ಸಾಕ್ಷಿ ನುಡಿಯಲು ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ.

**6.** ಅಭಿಯೋಜನೆಯ ಪರವಾಗಿ ಸಾಕ್ಷಿ ವಿಚಾರಣೆ ಮುಗಿದ ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರ ಅಡಿಯಲ್ಲಿ ಆರೋಪಿತನ ಹೇಳಿಕೆಗಳನ್ನು ದಾಖಲು ಮಾಡಿದ್ದು ಅದರಲ್ಲಿ ಆರೋಪಿತನು ಅಭಿಯೋಜನೆಯ ಪರ ಸಾಕ್ಷಿದಾರರು ಆರೋಪಿತನ ವಿರುದ್ಧ ನುಡಿದಿರುವ ಸಾಕ್ಷ್ಯವನ್ನು ಅಲ್ಲಗಳೆದಿದ್ದು ತನ್ನ ಪರ ಸಾಕ್ಷಿದಾರರು ಇಲ್ಲವೆಂದು ಈ ಪ್ರಕರಣವನ್ನು ವಾದಕ್ಕೆ ಮುಂದೂಡಲಾಯಿತು.

**KAYG030011942020**

**7.** ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು ಮತ್ತು ನ್ಯಾಯಾಲಯದ ಸಮ್ಮುಖದಲ್ಲಿರುವ ಈ ಮೊಕದ್ದಮೆಗೆ ಸಂಬಂಧಪಟ್ಟ ದಾಖಲೆಗಳನ್ನು ಕೂಲಂಕೂಷವಾಗಿ ಪರಿಶೀಲಿಸಲಾಯಿತು.

**8.** ಅಭಿಯೋಜನ ಪಕ್ಷದವರು ಆರೋಪಿತನ ವಿರುದ್ಧ ಮಾಡಿರುವ ಆರೋಪಗಳು ರೀತ್ಯಾ ಈ ನ್ಯಾಯಾಲಯದ ತೀರ್ಮಾನಕ್ಕೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತದೆ.

> **ಅಂಶ ಸಂಖ್ಯೆ 1ಃ** ದಿನಾಂಕ 08.02.2020 ರಂದು ಸಂಜೆಃ 06.20 ಗಂಟೆಗೆ ಯಾದಗಿರಿ(ಗ್ರಾ) ಪೋಲಿಸ ಠಾಣಾ ವ್ಯಾಪ್ತಿಯಲ್ಲಿ ಬರುವ ಯಡ್ಡಳ್ಳಿ ಗ್ರಾಮದಲ್ಲಿ ಆರೋಪಿತನು ತನ್ನ ಅಂಗಡಿಯಲ್ಲಿ90 ಎಂ.ಎಲ್ 50 ಓರಿಜಿನಲ್ ಚಾಯ್ಸಿ ಪಾಕೇಟ್ ಮದ್ಯವನ್ನು ಸರ್ಕಾರದಿಂದ ಯಾವುದೇ ಪರವಾನಿಗೆಯನ್ನು ಪಡೆಯದೇ ಮಾರಾಟ ಮಾಡಲು ಅಕ್ರಮ ಮದ್ಯ ಸಂಗ್ರಹಿಸಿಟ್ಟಿದ್ದು ಮತ್ತು ಮಾರಾಟ ಮಾಡಿದ್ದು, ಈ ಮೂಲಕ ಆರೋಪಿತಳು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32, 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆ ಎಂದು ಅಭಿಯೋಜನೆಯು ನಿಸ್ಸಂಶಯವಾಗಿ ರುಜುವಾತು ಪಡಿಸುವವರೇ?
>
> **ಅಂಶ ಸಂಖ್ಯೆ 2 ಃ** ಯಾವ ಅದೇಶ ?

**9.** ಈ ನ್ಯಾಯಾಲಯದ ತೀರ್ಮಾನಕ್ಕೆ ಉದ್ಭವಿಸಿರುವ ಮೇಲ್ಕಂಡ ಅಂಶಗಳಿಗೆ ಕೆಳಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಈ ನ್ಯಾಯಾಲಯವು ಉತ್ತರಿಸಿದೆ.

**ಅಂಶ ನಂ.1 ಃ ನಕಾರಾತ್ಮಕವಾಗಿ**

**ಅಂಶ ನಂ.2** ಃ ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ.

## ಕಾ ರ ಣ ಗ ಳು

10. **ಅಂಶ ಸಂಖ್ಯೆ.1:** ಈ ಪ್ರಕರಣದಲ್ಲಿ ಆರೋಪಿತನು ಕರ್ನಾಟಕ ಅಬಕಾರಿ ಕಾಯ್ದಿ ಕಲಂ 32, 34 ಉಲ್ಲಘನೆ ಮಾಡಿ ಅಕ್ರಮವಾಗಿ ಮದ್ಯವನ್ನು ಸ್ವಾಧೀನದಲ್ಲಿ ಇಟ್ಟು ಕೊಂಡು, ಮಾರಾಟ ಮಾಡುತ್ತಿದ್ದರು ಎಂದು ನಿಸ್ಸಂದೇಹವಾಗಿ ರುಜುವಾತು ಪಡಿಸುವ ಜವಾಬ್ದಾರಿ ಅಭಿಯೋಜನಾ ಪಕ್ಷದವರ ಮೇಲೆ ಇರುತ್ತದೆ.

11. ಅಭಿಯೋಜನೆಯು ಈ ಪ್ರಕರಣದ ದಾಳಿಗೆ ಸಹಕಾರಿಸಿದ ಪೋಲಿಸ ಸಿಬ್ಬಂದಿ ಚಾಸಾಃ 4 ರವರನ್ನು ಪ್ರಾಸಾಃ 1 ಎಂದು ವಿಚಾರಣೆಗೊಳಪಡಿಸಿ ಪ್ರಾಸಾಃ1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 08.02.2020 ರಂದು ಯಡ್ಡಳ್ಳಿ ಗ್ರಾಮದಲ್ಲಿ ಆರೋಪಿತನು ಅನಧಿಕೃತವಾಗಿ ಮದ್ಯ ಮಾರಾಟ ಮಾಡುತ್ತಿದ್ದಾನೆ ಎಂದು ಚಾಸಾಃ1 ರವರಿಗೆ ಬಾತ್ಮಿ ಬಂದ ಮೇರೆಗೆ, ಸಿಬ್ಬಂಧಿಯವರಾದ ಚಾಸಾ-4 ರಿಂದ 7 ಮತ್ತು ಪಂಚರಾದ ಚಾಸಾಃ2 ಮತ್ತು 3 ರವರ ಜೊತೆ ಸ್ಥಳಕ್ಕೆ ಬೇಟಿ ನೀಡಿದಾಗ ಆರೋಪಿತನು ಮದ್ಯ ಮಾರಾಟ ಮಾಡುವುದನ್ನು ನೋಡಿ ದಾಳಿ ಮಾಡಿದಾಗ 90 ಎಂ.ಎಲ್ 50 ಓರಿಜಿನಲ್ ಚಾಯ್ಸಿ ಪಾಕೇಟ್ ಸಿಕ್ಕಿರುತ್ತದೆ. ತದನಂತರ ಚಾಸಾಃ1 ರವರು ಚಾಸಾ-2 ಮತ್ತು 3 ರವರ ಸಮಕ್ಷಮ ಜಪ್ತಿ ಪಂಚನಾಮೆಯನ್ನು ಮಾಡಿ ನಂತರ ಠಾಣೆಗೆ ಬಂದು ಜಪ್ತಿ ಪಂಚನಾಮೆ ಹಾಗೂ ಜಪ್ತಿ ಪಡಿಸಿಕೊಂಡು ಸೇಂಧಿ ಮುಂದಿನ ಕ್ರಮಕ್ಕಾಗಿ ಚಾಸಾ-9 ರವರಿಗೆ ವಹಿಸಿಕೊಟ್ಟಿರುತ್ತಾರೆ

ಎಂದು ನುಡಿದಿರುತ್ತಾರೆ. ಪ್ರಾಸಾ:1 ರವರು ಆರೋಪಿ ಮತ್ತು ಮುದ್ದೆ ಮಾಲು 1 ನ್ನು ನೋಡಿ ಗುರುತಿಸಿರುತ್ತಾರೆ.

**12.** ಈ ಪ್ರಕರಣದಲ್ಲಿ ಅಭಿಯೋಜನೆದವರು ತನಿಖಾಧಿಕಾರಿ ಚಾಸಾ:9 ರವರನ್ನು ಪ್ರಾಸಾ: 3 ಎಂದು ವಿಚಾರಗೊಳ್ಳಪಡಿಸಿರುತ್ತಾರೆ. ಪ್ರಾಸಾ:3 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಚಾಸಾ:1 ರವರು ಜಪ್ತಿ ಪಂಚನಾಮೆ ಮತ್ತು ವರದಿಯನ್ನು ಹಾಜರುಪಡಿಸಿದ ನಂತರ ಆರೋಪಿತಳ ವಿರುದ್ಧ ಗುನ್ನೆಯನ್ನು ದಾಖಲಿಸಿಕೊಂಡು ನ್ಯಾಯಾಲಯಕ್ಕೆ ಪ್ರಥಮ ವರ್ತಮಾನ ವರದಿ ಕಳುಹಿಸಿ, ಸಾಕ್ಷಿದಾರರ ಹೇಳಿಕೆ ಮತ್ತು ವರದಿಯನ್ನು ಪಡೆದುಕೊಂಡಿರುತ್ತೇನೆಂದು ನುಡಿದಿರುತ್ತಾರೆ. ಪ್ರಾಸಾ:3 ರವರು ಆರೋಪಿ ಮತ್ತು ಮುದ್ದೆ ಮಾಲು 1 ನ್ನು ಗುರುತಿಸಿರುತ್ತಾರೆ. ಸದರಿ ಪ್ರಾಸಾ:1, 2 ರವರನ್ನು ಪಾಟಿ ಸವಾಲಿಗೆ ಒಳಪಡಿಸಿದರೂ ಕೂಡ ಆರೋಪಿಗೆ ಪೂರಕವಾಗಿ ಅಂಶಗಳನ್ನು ಹೊರಗೆಡವಲು ಆಗಿರುವುದಿಲ್ಲ. ಸದರಿ ಪ್ರಾಸಾ: 1, 2 ರವರ ಸಾಕ್ಷ್ಯದಲ್ಲಿ ಸಮಯ, ಪಂಚರ ಕುರಿತು ಸಾಕ್ಷ್ಯವು ಸ್ವಪ ಹೊಂದಾಣಿಕೆ ಇಲ್ಲದೆ ಇದ್ದರೂ ಕೂಡ ಸದರಿ ಸಾಕ್ಷ್ಯದಾರರ ಸಾಕ್ಷ್ಯವು ಸ್ಥಿರತೆ ಹೊಂದಿರುತ್ತದೆ.

**13.** ಪ್ರಮುಖವಾಗಿ ಗಮನಿಸಬೇಕಾದ ಅಂಶವೇನೆಂದರೆ, ಅಭಿಯೋಜನೆಯು ಆರೋಪಿ ಅಕ್ರಮವಾಗಿ ಮದ್ಯ ಸಂಗ್ರಹಿಸಿ, ಮಾರಾಟ ಮಾಡಿರುತ್ತಾರೆಂದು ರುಜುವಾತು ಪಡಿಸಲು ನಿಪಿ-1 ನ್ನು ಅವಲಂಬಿಸಿರುತ್ತಾರೆ. ಸದರಿ ನಿಪಿ-1 ರ ಪಂಚನಾಮ ಸಾಕ್ಷಿದಾರರಾದ ಪ್ರಾಸಾ:2 ರವರ

ತಮ್ಮ ಮುಖ್ಯ ವಿಚಾರಣೆಯಲ್ಲಿ ತಮ್ಮ ಸಮಕ್ಷಮದಲ್ಲಿ ಜಪ್ತಿ ಪಂಚನಾಮೆಯನ್ನು ಪೋಲಿಸರು ಮಾಡಿರುವುದಿಲ್ಲ ಮತ್ತು ಮುದ್ದೆ ಮಾಲನ್ನು ಅವರ ಸಮಕ್ಷಮದಲ್ಲಿ ಪೋಲಿಸರು ಜಪ್ತಿ ಪಡಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ಪ್ರಾಸಾಃ2 ರವರು ತಮ್ಮ ಸಹಿಗಳನ್ನು ನಿಪಿ-1 ರಲ್ಲಿ ಗುರುತಿಸಿದ್ದರೂ ಕೂಡ, ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿ ಸಾಕ್ಷಿ ನುಡಿದಿರುವುದಿಲ್ಲ, ಸದರಿ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾಃ2 ರವರನ್ನು ಪಾಟಿ ಸವಾಲಿಗೆ ಒಳಪಡಿಸಿದರೂ ಕೂಡ ಪ್ರಾಸಾಃ2 ರವರು ತಮ್ಮ ಸಾಕ್ಷ್ಯದಲ್ಲಿ ಅವರ ಸಮಕ್ಷಮದಲ್ಲಿ ಪೋಲಿಸರು ಮದ್ಯ ಜಪ್ತಿ ಮಾಡಿರುವುದನ್ನು ಅಲ್ಲಗಳೆದಿರುತ್ತಾರೆ.

**14.** ಪ್ರಸ್ತುತ ಪ್ರಕರಣದಲ್ಲಿ ಯಾವುದೇ ಸ್ವತಂತ್ರ ಸಾಕ್ಷಿದಾರರನ್ನು ವಿಚಾರಣೆಗೊಳಪಡಿಸಿರುವುದಿಲ್ಲ. ಪ್ರಾಸಾಃ2 ರವರು ಕೂಡ ಪ್ರಾಸಾಃ1 ರವರ ಸಾಕ್ಷ್ಯಕ್ಕೆ ಪೂರಕವಾಗಿ ನುಡಿಯಬೇಕಾಗಿರುತ್ತದೆ. ನಿಪಿ-1 ನ್ನು ಅಭಿಯೋಜನೆಯ ರುಜುವಾತುಪಡಿಸಿರುವುದಿಲ್ಲ. ಸದರಿ ಪಂಚನಾಮೆಯ ಸಾಕ್ಷಿದಾರರ ಪೂರಕವಾದ ಸಾಕ್ಷ್ಯದ ಅನುಪಸ್ಥಿತಿಯಲ್ಲಿ ಕೇವಲ ಇಲಾಖಾ ಸಾಕ್ಷಿದಾರರ ಸಾಕ್ಷ್ಯದ ಆಧಾರದ ಮೇಲೆ ಆರೋಪಿಯನ್ನು ಶಿಕ್ಷಗೆ ಒಳಪಡಿಸುವುದು ಸಮಂಜಸವಲ್ಲ. ಅಭಿಯೋಜನೆಯ ಇಲಾಖಾ ಸಾಕ್ಷಿದಾರರಾದ ಪಿ.ಡಬ್ಲೂ-1 ಮತ್ತು 3 ಸಾಕ್ಷ್ಯಕ್ಕೆ ಪೂರಕವಾಗಿ ಪ್ರತ್ಯೇಕ ಸಾಕ್ಷಿದಾರರನ್ನು ವಿಚಾರಣೆಗೊಳಪಡಿಸಿರುವುದಿಲ್ಲ. ಆದ್ದರಿಂದ ಕೇವಲ ಇಲಾಖಾ ಸಾಕ್ಷಿದಾರರ ಸಾಕ್ಷ್ಯದ ಮೇಲೆ ಅವಲಂಬಿಸುವುದು ಸಮಂಜಸವಲ್ಲ. ಚಾಸಾ-1 ಮತ್ತು 3 ರವರಿಗೆ ಅವಕಾಶ ನೀಡಿದರೂ ಕೂಡ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿದಿರುವುದಿಲ್ಲ. ಪ್ರಾಸಾಃ3 ರವರು

ಸದರಿ ಅಂಗಡಿ ಆರೋಪಿತನಿಗೆ ಸೇರಿರುತ್ತದೆ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ತನ್ನ ತನಿಖಾ ಅವಧಿಯಲ್ಲಿ ಪಡೆದುಕೊಂಡಿರುವುದಿಲ್ಲ.

15. ಈ ಮೇಲಿನ ಸಾಕ್ಷ್ಯಾಧಾರಗಳನ್ನು ಕೂಲಂಕೂಷವಾಗಿ ಪರಿಶೀಲಿಸಿದಾಗ ಅಭಿಯೋಜನೆಯು ಆರೋಪಿ ಅಕ್ರಮವಾಗಿ ಮದ್ಯ ಸ್ವಾಧೀನದಲ್ಲಿ ಇಟ್ಟುಕೊಂಡು, ನಿಷೇಧ ಇದ್ದರೂ ಕೂಡ ಮಾರಾಟ ಮಾಡುತ್ತಿದ್ದರೂ ಎಂದು ಮಾಡಿರುವ ದೋಷಾರೋಪಣೆಯನ್ನು ನಿಸ್ಸಂದೇಹವಾಗಿ ರುಜುವಾತು ಪಡಿಸಲು ವಿಫಲವಾಗಿದೆಯೆಂದು ಅಭಿಪ್ರಾಯಪಡುತ್ತಾ ಸಂಶಯದ ಲಾಭವನ್ನು ಆರೋಪಿತಳಿಗೆ ನೀಡುತ್ತಾ **1 ನೇ ಅಂಶವನ್ನು ನಕಾರಾತ್ಮಕವಾಗಿ ಈ ನ್ಯಾಯಾಲಯವು ಉತ್ತರಿಸುತ್ತದೆ.**

16. ಅಂಶ ನಂ.2: ಮೇಲ್ಕಂಡಂತೆ ಚರ್ಚಿಸಿ ಬಂದ ನಿರ್ಣಯದಂತೆ ಈ ನ್ಯಾಯಾಲಯವು ಕೆಳಕಂಡ ಆದೇಶವನ್ನು ಮಾಡಿರುತ್ತದೆ.

## ಃ ಆದೇಶ ಃ

ದಂಡ ಪ್ರಕ್ರಿಯೆ ಸಂಹಿತೆ ಕಲಂ.248(1) ರಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಆರೋಪಿ ವಿರುದ್ಧ ಮಾಡಲಾದ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32, 34 ರಡಿಯಲ್ಲಿ ಆರೋಪದಿಂದ ಆರೋಪಿಯನ್ನು ಈ ಮೊಕದ್ದಮೆಯಿಂದ ದೋಷಮುಕ್ತನಾಗಿ ಖುಲಾಸೆಗೊಳಿಸಿರುತ್ತೇನೆ.

ಆರೋಪಿತನು ಆರೋಪದಿಂದ ಸ್ವತಂತ್ರನು.

**KAYG030011942020**

ಆರೋಪಿತನು ಮತ್ತು ಅವರ ಪರ ಜಾಮೀನುದಾರನು ಬರೆದುಕೊಟ್ಟಿರುವ ಜಾಮೀನು ಬಾಂಡ್ ಮತ್ತು ಮುಚ್ಚಳಿಕೆಯನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ)ರಡಿ 6 ತಿಂಗಳವರೆಗೆ ಚಾಲ್ತಿಯಲ್ಲಿರುತ್ತದೆ.

ಮುದ್ದೆ ಮಾಲು 1 ನ್ನು ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸಲು ಈ ಮೂಲಕ ನಿರ್ದೇಶಿಸಲಾಗಿದೆ.

(ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಅವರು ಬೆರಳಚ್ಚು ಮಾಡಿದ ನಂತರ ಅದನ್ನು ಪರಿಷ್ಕರಿಸಿ, ತಿದ್ದುಪಡಿ ಮಾದಿ ಈ ದಿವಸ ಅಂದರೆ **ದಿನಾಂಕ 2 ನೇ ಮೇ 2026 ನೇ ಇಸವಿಯಂದು** ತೆರೆದ ನ್ಯಾಯಾಲಯದಲ್ಲಿ ಆದೇಶವನ್ನು ಘೋಷಿಸಲಾಯಿತು.)

**(ರಾಹುಲ ರಾವ್)**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು,**
**ಯಾದಗಿರಿ.**

**KAYG030011942020**

## ಅನುಬಂಧ

**1. ಅಭಿಯೋಜನಾ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ಪಟ್ಟಿ ಃ**

ಪ್ರಾ.ಸಾಃ 1 ಃ ಪ್ರಭುಗೌಡ ತಂದೆ ಬಸವರಾಜಪ್ಪ ಗೌಡ.

ಪ್ರಾ.ಸಾಃ 2 ಃ ವೆಂಕಟೇಶ ತಂದೆ ಶರಣಪ್ಪ.

ಪ್ರಾ.ಸಾಃ 3 ಃ ಶಾಂತಪ್ಪ ತಂದೆ ಕನಕಪ್ಪ.

**2. ಅಭಿಯೋಜನಾ ಪರ ಗುರುತಿಸಲ್ಪಟ್ಟ ದಾಖಲಾತಿಗಳ ಪಟ್ಟಿ ಃ**

ನಿಪಿ-1 ಃ ಜಪ್ತಿ ಪಂಚನಾಮೆ..

ನಿಪಿ-2 ಃ ಪ್ರಥಮ ವರ್ತಮಾನ ವರದಿ.

ನಿಪಿ-3 ಃ ತಜ್ಞರ ವರದಿ.

ನಿಪಿ-4 ಃ ಅಬಕಾರಿ ಇಲಾಖೆಗೆ ನೀಡಿದ ವರದಿ.

ನಿಪಿ-5 ಃ ನೋಟಿಸ್.

**3. ಅಭಿಯೋಜನಾ ಪರ ಗುರುತಿಸಲ್ಪಟ್ಟ ಮುದ್ದೆ ಮಾಲುಗಳ ಪಟ್ಟಿಃ**

ಮುದ್ದೆ ಮಾಲು 1 : ಮದ್ಯ ಬಾಟಲಿಗಳು

**4. ಆರೋಪಿ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ಮತ್ತು ದಾಖಲಾತಿ ಪಟ್ಟಿ ಃ**

-ಇಲ್ಲ-

**(ರಾಹುಲ ರಾವ್)**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು,**

**ಯಾದಗಿರಿ.**